ತೆಗೆದು ಕಂಕುಳಿಗಿರಿಸಿ, ಕೈ ಕಟ್ಟಿಕೊಂಡು ನಡು ಬಗ್ಗಿಸಿ ಅಷ್ಟು ದೂರ ನಿಂತು ಗೌಡುಗಳು ಅಂದಂತೆ 'ಸ್ವಾಮಿ' ಅಂತಾರೆ. ಅಲ್ಲ ಅವ್ರು ಮಾತ್ರ ಹೆಂಗೆ ಬ್ರಾಹ್ಮಣ್ರಾದ್ರು? ನಾವೆಲ್ಲ ಯಾಕೆ ಆಗ್ಲಿಲ್ಲ? ಜನಿವಾರ ಹಾಕ್ಕಳಾದು, ದಿನಾ ಸ್ನಾನ ಮಾಡಾದು, ಸೂರ್ಯನಿಗೆ ಬೊಗ್ಸೆಲಿ ನೀರು ಬುಡಾದು, ಕಲ್ಮಂಟ ಮೇಲೆ ಕುಂತು ಕಣ್ಮುಚ್ಚಿ ಧ್ಯಾನ ಮಾಡಾದು, ಹಣೆಗೆ ಗಂಧ ಹಚ್ಕಂಡು ಗುಡಿಲಿರೊ ರಂಗನಾಥಸ್ವಾಮಿಗೆ -ಮಂತ್ರ ಯೋಳ್ತಾ ಪೂಜೆ ಮಾಡಾದು, ಜನ್ರಿಗೆ ತೇರ್ಥಾ ಕೊಡಾದು. ಇಷ್ಟು ಮಾಡಿದ್ಕೆ ಅವ್ರು ಬ್ರಾಹ್ಮಣ್ರಾದ್ರ?! ಹಂಗಾರೆ ಅವ್ರಂಗೆ ನಾವೂ ಮಾಡಿದ್ರಾತು. ಆಗ ಯಲ್ರೂ ಬ್ರಾಹ್ಮಣ್ರಾಗಿ ಯಾರು ಯಾರನ್ನೂ ಸ್ವಾಮಿ ಅನ್ನಂಗಿಲ್ಲ, ಕೈ ಮುಗಿಯಂಗಿಲ್ಲ, ಭಯಪಡಂಗಿಲ್ಲ, ದೂರ ನಿಲ್ಲಂಗಿಲ್ಲ'

ಹೀಗೆಲ್ಲಾ ಯೋಚನೆ ಮಾಡುತ್ತ ಕೂತಲ್ಲೇ ಕೂರುತ್ತಿದ್ದ. ದಿನ ಕಳೆದಂತೆ ಮಿತ ಭಾಷಿಯಾದ, ಪಾಠದಲ್ಲಿ ಅವನಿಗೆ ಆಸಕ್ತಿ ಇಲ್ಲವಾಯಿತು. ತನ್ನಟ್ಟಿಯ ಹುಡುಗರೊಂದಿಗೆ ಬೆರೆಯುವುದನ್ನೆ ಬಿಟ್ಟ. ಅವನ ಮನಸ್ಸಿನ ತುಂಬಾ ಬ್ರಾಹ್ಮಣರು, ಅವರ ಆಚಾರ ವಿಚಾರಗಳೇ ತುಂಬಿ ಹೋಗಿದ್ದವು. ರಾತ್ರಿ ಮಲಗಿ ಕಣ್ಮುಚ್ಚಿದಾಗಲೂ ಗುಡಿಸಲಿನೊಳಗೆ ಅವರೇ ಬಂದು ನಿಂತಂತಾಗುತ್ತಿತ್ತು.

ಎಳೆಗರುವಿನಂತೆ ಚೂಟಿಯಾಗಿದ್ದ ಮಗ ಮಂಕಾಗಿದ್ದನ್ನು ಗಮನಿಸಿದ ಕರ್ಕಿಲಿಗೆ ಆತಂಕವಾಯಿತು. ಕೋಳಿ ಕೂಗೋ ಹೊತ್ನಲ್ಲಿ ಕೆರೆತಾಕೆ ಹೋಗ್ಬೇಡ ಅಂದಿದ್ಕೇನಾದ್ರು ಬ್ಯಾಸ್ರ ಮಾಡ್ಕಂಡ್ನ ಅಂದ್ಕಂಡು ರಾತ್ರಿ ಮಲಗಿದವಳು ಬೆಳಿಗ್ಗೆ ಎದ್ದು ಸೀಮೆಎಣ್ಣೆ ಬುಡ್ಡಿಗೆ ಬೆಂಕಿಕಡ್ಡಿ ಗೀರಿ ಬೆಳಕಲ್ಲಿ ನೋಡಿದಾಗ ಕೌದಿಯ ಮೇಲೆ ಗೊದ್ಲೆ ಕಾಣಲಿಲ್ಲ. ಸೀಮೆಎಣ್ಣೆ ಬುಡ್ಡಿಯನ್ನು ಗುಡಿಸಲ ಮುಂಭಾಗದತ್ತ ಹಿಡಿದಾಗ ತಡಿಕೆ ಇರಲಿಲ್ಲ. ಚಡಪಡಿಸುತ್ತ ಮೇಲೆದ್ದು ಹೊರಬಂದು ನೋಡಿದಾಗ ಗೊದ್ಲೆ ಗುಡಿಸಲ ಗೋಡೆಗೊರಗಿ ಕಣ್ಮುಚ್ಚಿ ಕುಳಿತಿದ್ದ.

ಸಮಾಧಾನದ ನಿಟ್ಟುಸಿರು ಬಿಟ್ಟು, ಸೀಮೆಎಣ್ಣೆ ಬುಡ್ಡಿಯನ್ನು ಕೆಳಗಿಟ್ಟು ಗೊದ್ಲೆಯ ತಲೆಯನ್ನು ಪ್ರೀತಿಯಿಂದ ನೇವರಿಸಿದಳು. ಗೊದ್ಲೆ ಕಣ್ಣು ಬಿಟ್ಟ.

'ಯೋನಾತು? ಒಂದ್ವಾರದಿಂದ ಸಪ್ಪಗಿದ್ದೀಯ, ಯಾಕ್ಲ? ನನ್ಕುಟೆ ಯೋಳು'.

'ಮತ್ತೆ ನನ್ನೆಸ್ರ ಬದ್ಲಾಯ್ಸು ಅಂತಂದ್ರೆ ಅಪ್ಪಯ್ಯ ಬ್ಯಾಡ ಅಂತಾನೆ'.

'ಆಟೆಯ ಬುಡು, ನಿನ್ನಪ್ಪಯ್ಯಂಗೆ ನಾ ಯೋಳ್ತೀನಿ'.

'ಅವ್ವೊ, ಬೋದಿನಾತು, ಕೆರೆತಾಕೆ ಹೋಗ್‌ಬರ್ಲಾ?'

ಬೇಡ ಅಂದ್ರೆ ಬೇಜಾರು ಮಾಡಿಕೊಂಡಾನು ಎಂದು "ಹೂಂ, ಹ್ವಾಗಿ ಬಿರ್ನೆ ಬಾ" ಎನ್ನುತ್ತ ಬುಡ್ಡಿ ಕೈಗೆತ್ತಿಕೊಂಡು ಒಳ ಬಂದಾಗ ಮುಳ್ಕಟ್ಟ ಎದ್ದು ಕುಳಿತಿದ್ದ.

ಹ್ವಾಗಿ ಬಿರ್ನೆ ಬಾ ಎಂದು ಕರ್ಕಿಲಿ ಹೇಳಿದ್ದು ಮಗನಿಗೆ ಎಂದು ಗೊತ್ತು ಮಾಡಿಕೊಂಡ ಅವನು ಕೇಳಿದ.

'ಗೊದ್ಲೆ ಯೊಲ್ಲಿ?'

ಅವನ ಪ್ರಶ್ನೆಗೆ 'ಇಲ್ಲೆ ಹೋಗ್ಬತ್ತೀನಿ ಅಂತ ಹೋಗೊವ್ನೆ' ಎಂದು ಚುಟುಕಾಗಿ ಉತ್ತರಿಸಿದಳು.

'ಕೆರೆತಾಕೆ ಹ್ವಾದ್ನ ಹೆಂಗೆ?'

ಅವನ ಎರಡನೇ ಪ್ರಶ್ನೆಗೆ ಉತ್ತರಿಸುವ ಗೋಜಿಗೆ ಹೋಗದೆ ಕೌದಿ ಮಡಿಸತೊಡಗಿದ ಅವಳನ್ನೇ ನೋಡುತ್ತಾ ಕುಳಿತ ಮುಳ್ಕಟ್ಟ.

ಗೊದ್ಲೆ ಕೆರೆ ಹತ್ತಿರ ಬಂದಾಗ ಕತ್ತಲೆಯೊಳಗೆ ಬೆಳಕು ನಿಧಾನವಾಗಿ ತೂರಿಕೊಳ್ಳುತ್ತ ಜಾಗ ಮಾಡಿಕೊಳ್ಳುತ್ತಿತ್ತು. ಬ್ರಾಹ್ಮಣರು ಪೂರ್ವಾಭಿಮುಖವಾಗಿ ಕಲ್ಲು ಮಂಟಿಯ ಮೇಲೆ ಪದ್ಮಾಸನ ಹಾಕಿ ಕುಳಿತು ಧ್ಯಾನ ಮಾಡುತ್ತಿದ್ದರು. ಅವರುಗಳ ಮುಖದ ನೇರಕ್ಕೆ ಇದ್ದ ಕಲ್ಲು ಮಂಟಿಯ ಮೇಲೆ ಕುಳಿತ ಗೊದ್ಲೆ, ಅವರಂತೆ ಪದ್ಮಾಸನ ಹಾಕಲು ಪ್ರಯತ್ನಪಟ್ಟ. ಆಗಲಿಲ್ಲ. ಕೊನೆಗೆ ಬಲ ಪಾದವನ್ನು ಎಡ ತೊಡೆಯ ಮೇಲಿರಿಸಿ ಕಣ್ಣು ಮುಚ್ಚಿಕೊಂಡ.

ಧ್ಯಾನ ಮುಗಿಸಿ ಕಣ್ಣು ಬಿಟ್ಟ ಬ್ರಾಹ್ಮಣರಿಗೆ ಗೊದ್ಲೆಯ ಬೆನ್ನು ಕಾಣಿಸಿತು.

'ಅದಾರು? ಧ್ಯಾನಕ್ಕೆ ಕುಳಿತಂತೆ ಕಾಣುತ್ತದೆ' ಎಂದರು ಒಬ್ಬರು.

'ಬನ್ನಿ ಸಮೀಪ ಹೋಗಿ ನೋಡುವ' ಎಂದರು ಮತ್ತೊಬ್ಬರು.

ಎಲ್ಲರೂ ಬಂದು ಗೊದ್ಲೆಯ ಮುಂದೆ ನಿಂತರು. ಹಿರಿಯರಾದ ಶ್ರೀಕಂಠ ಆಶ್ಚರ್ಯದಿಂದ ಕಣ್ಣರಳಿಸಿ, 'ಇವನು ಹೊಲ್ಗೇರಿಯ ಮುಳ್ಕಟ್ಟನ ಮಗ ಗೊದ್ಲೆ. ದಿನಾ ಅಷ್ಟೊತ್ತಿಗೇ ಬಂದು ಆ ಬಂಡೆಯ ಮೇಲೆ ಕುಳಿತು ನಾವು ಜಳಕ ಮಾಡಿ ಸೂರ್ಯನಿಗೆ ತರ್ಪಣ ಕೊಟ್ಟು ಧ್ಯಾನ ಮಾಡುವುದ ನೋಡುತ್ತಿದ್ದ. ಈಗ ಅವನೇ ಧ್ಯಾನಕ್ಕೆ ಕುಳಿತಿದ್ದಾನೆ' ಎಂದರು.